ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ.

3417(4403) ಶ್ರೀ ಯ.ಆರ್. ಸಭಾಪತಿ (ಉಡುಪಿ) :— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ 1999-2000, 2000-2001ರ ಸಾಲಿನಲ್ಲಿ ಸರ್ಕಾರ ನೀಡಬೇಕಾದ ಸಹಾಯಧನ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

2. ಈ ಪೈಕಿ ಮೇಲ್ಕಂಡ ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಿದ ಸಹಾಯಧನ ಎಷ್ಟು ಹಾಗೂ ಬಾಕಿ ಉಳಿದ ಹಣವೆಷ್ಟು;

3. ಬಾಕಿ ಉಳಿಯಲು ಕಾರಣಗಳೇನು?

4. ಈ ರೀತಿ ಬಾಕಿ ಉಳಿದ ಸಹಾಯಧನವನ್ನು ಎಂದಿನಿಂದ ಬಿಡುಗಡೆ ಮಾಡಲಾಗುವುದು.

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :—

1. ಮಾರ್ಚ್ 2000ರವರೆಗೆ ರೂ.22,986.92 ಲಕ್ಷಗಳು ಬಿಡುಗಡೆ ಆಗಬೇಕಾಗಿರುತ್ತದೆ. ಮತ್ತು ಜೂನ್ 2000ರ ಅಂತ್ಯಕ್ಕೆ ಒಟ್ಟು ರೂ. 23841.16ಲಕ್ಷಗಳು ಬಿಡುಗಡೆ ಆಗಬೇಕಾಗಿರುತ್ತದೆ. ಜಿಲ್ಲಾವಾರು ವರದಿ ಲಗತ್ತಿಸಲಾಗಿದೆ.

2. 1999-2000ನೇ ಸಾಲಿನಲ್ಲಿ ರೂ.116.39 ಕೋಟಿ ಈ ಕೆಳಗಿನಂತೆ ಬಿಡುಗಡೆಯಾಗಿರುತ್ತದೆ.

ಸಾಮಾನ್ಯ ವರ್ಗದವರಿಗೆ

ಕೇ. 100 ಡಿಸೆಂಬರ್ 98ರ ಅಂತ್ಯದವರೆಗೆ

ಕೇ. 50 ಫೆಬ್ರವರಿ 99ರ ಅಂತ್ಯದವರೆಗೆ

ವಿಶೇಷ ವರ್ಗದವರಿಗೆ

ಕೇ. 100ಡಿಸೆಂಬರ್ 98ರ ಅಂತ್ಯದವರೆಗೆ

ಕೇ. 50 ಜೂನ್ 99ರವರೆಗೆ

ಇನ್ನೂ ರೂ. 238.41 ಕೋಟಿ ಬಾಕಿ ಬಿಡುಗಡೆ ಮಾಡಬೇಕಾಗಿರುತ್ತದೆ.

3. 1-4-99 ರಿಂದ ಕಾರ್ಯಗತಗೊಳ್ಳುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಹಾಯಧನ ಸೌಲಭ್ಯವನ್ನು ಹಿಂತೆಗೆದುಕೊಳ್ಳಲಾಗಿದೆ. ಆದರೆ ಈ ಹಿಂದೆ ಕಾರ್ಯಗತಗೊಂಡ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಡಿಸೆಂಬರ್ 99ರವರೆಗೆ ಸಹಾಯಧನ ಪಡೆದುಕೊಳ್ಳಲು

ಅವಕಾಶ ನೀಡಲಾಗಿದೆ. ಹೀಗಾಗಿ ಕಳೆದ 4-5 ವರ್ಷಗಳೊಳಗಾಗಿ ಸ್ಥಾಪಿತವಾದ ಮತ್ತು ಸಹಾಯಧನ ಪಡೆಯದ ಎಲ್ಲಾ ಸಣ್ಣ ಪ್ರಮಾಣದ ಕೈಗಾರಿಕೆಗಳು ಒಮ್ಮೆಲೆ ಸಹಾಯಧನ ಮಂಜೂರಿಗೆ ಅರ್ಜಿ ಹಾಕಿದ್ದರಿಂದ 1999-2000 ರಲ್ಲಿ 6533 ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ 194.64 ಕೋಟಿ ರೂ. ಮಂಜೂರಾಗಿದೆ. ಆದುದರಿಂದ ಸಹಾಯಧನ ಬಾಕಿ ಉಳಿದಿದೆ. ಈ ಸಹಾಯಧನ ಬಿಡುಗಡೆಗೆ ಪ್ರಯತ್ನಿಸಲಾಗುತ್ತಿದೆ.

4. ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನಾಧರಿಸಿ, ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

ANNEXURE

DISTRICT WISE STATE INVESTMENT SUBSIDY PENDENCY AVAILABLE AS ON 30.6.2000

Sl. No.	Name of the District	No. of Units Balance	Amount (Rs.in lacs)	Percentage Amt. Pendency
1	2	3	4	5
1.	Dakshina Kannada	520	1352.23	5.67
2.	Bellary	281	872.06	3.66
3.	Mercara	81	267.70	1.12
4.	Shimoga	196	467.13	1.96
5.	Hassan	376	570.39	2.4
6.	Mandya**	153	325.59	1.37
7.	Raichur	134	443.12	1.86
8.	Dharwad **	542	1252.91	5.26
9.	Bangalore (Urban)**	776	4447.00	18.65
10.	Mysore**	368	1254.580	5.26
11.	Tumkur**	522	1262.85	5.3
12.	Chickmagalur**	164	400.26	1.68
13.	Gulbarga**	181	607.17	2.55
14.	Belgaum*	751	1279.52	5.37
15.	Chitradurga	230	452.95	1.9
16.	Kolar**	693	2017.82	8.46
17.	Bijapur	263	519.14	2.18
18.	Bangalore (Rural)**	967	2394.12	10.005
19.	Bidar	303	357.35	1.5
20.	Karwar	535	940.10	4
21.	Davangere**	105	331.86	1.4

1	2	3	4	5
22.	Chamrajnagar	150	292.10	1.23
23.	Haveri**	79.0	111.82	0.5
24.	Gadag	144	151.39	0.64
25.	Koppal**	83	399.25	1.68
26.	Udupi	301	849.41	3.56
27.	Bagalkot	117	221.34	0.93
	Total	9004	23841.16	

* As on 31.5.2000
** As on 31.3.2000

ರಾಜ್ಯದಲ್ಲಿ ನಷ್ಟದಲ್ಲಿರುವ ನೇಕಾರರ ಸಂಘಗಳ ಅಭಿವೃದ್ಧಿ.

3418(4399) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ನಷ್ಟದಲ್ಲಿರುವ ನೇಕಾರರ ಸಂಘಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಕೇರಳ ತಮಿಳುನಾಡು ಆಂಧ್ರ ಪ್ರದೇಶಗಳಲ್ಲಿ ಕೈಮಗ್ಗದ ಬಟ್ಟೆಗಳಿಗೆ ಸಹಾಯಧನದ ರೂಪದಲ್ಲಿ ನೇಕಾರರ ಸಂಘಗಳಿಗೆ ಅವರು ಉತ್ಪಾದಿಸುವ ಬಟ್ಟೆಗಳಿಗೆ ಶೇ.30ರ ಸಹಾಯಧನ ನೀಡುತ್ತಿದ್ದು ಕರ್ನಾಟಕದಲ್ಲಿ ಸರ್ಕಾರ ಈ ಬಗ್ಗೆ ಯಾವ ಚಿಂತನೆ ನಡೆಸಿದೆ?

ಇ) ರಾಜ್ಯದಲ್ಲಿ ನೇಕಾರರ ಸಂಘಗಳಲ್ಲಿ ಉತ್ಪಾದಿಸಿದ ಕೈಮಗ್ಗ ಬಟ್ಟೆಗಳ ದಾಸ್ತಾನುಗಳು ಮಾರಾಟವಾಗದೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದೆಯೇ?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ಜಿಲ್ಲಾ ವಲಯ ಯೋಜನೆಯಡಿ ನೇಕಾರರ ಸಂಘಗಳಿಗೆ ದುಡಿಮೆ ಬಂಡವಾಳ ಸಾಲ ಮತ್ತು ಹೇರು ಬಂಡವಾಳವನ್ನು ನೀಡಲಾಗುತ್ತಿದೆ. ಸಂಘಗಳು ಉತ್ಪಾದಿಸಿದ ಬಟ್ಟೆಗಳ ಮಾರಾಟದ ಸಲುವಾಗಿ ಕೇಂದ್ರ ಪುರಸ್ಕೃತ ಯೋಜನೆಯಾದ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆಯಡಿ 1999-2000 ನೇ ಸಾಲಿನವರೆಗೆ ಸಹಾಯಧನವನ್ನು ಒದಗಿಸುತ್ತಿದ್ದು, ಕೇಂದ್ರ ಸರ್ಕಾರವು ಈ ಯೋಜನೆಯನ್ನು 31-3-2000ಕ್ಕೆ ಅಂತ್ಯಗೊಳಿಸಿದೆ.